Sanctioning of a Maternity Hospital for Chikkanayakanahalli Town.

*Q.—616. Sri C. H. LINGADEVARU (Chikkanayakanahally).—

Will the Government be pleased to state :—

(*a*) whether it is not a fact that requests are being made repeatedly since a long time for sanctioning a Maternity Hospital for Chikkanayakanahalli Town ;

(*b*) the steps they have taken in this behalf ?

A.—Sri K. NAGAPPA ALVA (Minister for Health).—

(*a*) No.

(*b*) Does not arise.

ಶ್ರೀ ಸಿ. ಎಚ್. ಲಿಂಗದೇವರು.—ಚಿಕ್ಕನಾಯಕನಹಳ್ಳಿಗೆ ಒಂದು ಹೆರಿಗೆ ಆಸ್ಪತ್ರೆ ಕೊಡ ಬೇಕೆಂದು ಇರುವ ಬೇಡಿಕೆ ಸರಕಾರದಲ್ಲೇ ಎಷ್ಟು ದಿವಸಗಳಿಂದ ಪೆಂಡಿಂಗ್ ಇದೆ ?

ಶ್ರೀ ಕೆ. ನಾಗಪ್ಪ ಆಳ್ವ.— ಆ ಏವರ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಚಿಕ್ಕನಾಯಕನಹಳ್ಳಿಗೆ ಒಂದು ಹೆರಿಗೆ ಆಸ್ಪತ್ರೆ ಕೊಡಬೇಕೆಂದು ಬಹಳ ಕಾಲದಿಂದ ಒತ್ತಾಯ ಮಾಡುತ್ತಿದ್ದರೂ ಹೆರಿಗೆ ಆಸ್ಪತ್ರೆ ಏಕೆ ಕೊಟ್ಟಿಲ್ಲ ?

ಶ್ರೀ ಕೆ. ನಾಗಪ್ಪ ಆಳ್ವ.— ಜನ ಕೇಳುತ್ತಿರುವುದು ಸರಿಯಾದ ರೀತಿಯಲ್ಲಿಲ್ಲ. ಸರಕಾರಕ್ಕೆ ಕೇಳುವುದರಲ್ಲಿ ಒಂದು ಕ್ರಮ ಇದೆ. ಯಾವ ರಿಪ್ರೆಜೆಂಟೇಷನ್ನೂ ಸರಕಾರಕ್ಕೆ ಬಂದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದು ಯಾವ ಕ್ರಮ, ಸ್ವಾಮಿ ? ಅದು ಯಾವ ಸರ್ಕ್ಯುಲರ್ ? ಅದರಲ್ಲಿ ಯಾವಯಾವ ಕಾಲಂ ಇವ, ದಯವಿಟ್ಟು ತಿಳಿಸಬೇಕು.

ಶ್ರೀ ಕೆ. ನಾಗಪ್ಪ ಆಳ್ವ.—ಪಂಚಾಯಿತಿ, ತಾಲ್ಲೂಕ್ ಬೋರ್ಡ್ ಮುಖಾಂತರ ಬೇಡಿಕೆ ಬರಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಅಲ್ಲಿಯ ಜನಸಂಖ್ಯೆ ಎಷ್ಟು ? ಹೆರಿಗೆ ಆಸ್ಪತ್ರೆ ಇಲ್ಲದೆ ಜನ ಯಾವರೀತಿ ನಿರ್ವಹಿಸುತ್ತಿದ್ದಾರೆ ಎನ್ನುವದನ್ನು ಅಪ್ಪಣೆ ಕೊಡಿಸಬೇಕು.

ಶ್ರೀ ಕೆ. ನಾಗಪ್ಪ ಆಳ್ವ.—ಪ್ರೈಮರಿ ಹೆಲ್ತ್ ಸೆಂಟರ್ ಅಲ್ಲಿ ಮಾಡಿದೆ. ಅದರಲ್ಲಿ ನಾಲ್ಕು ಬೆಡ್ಸ್ ಪ್ರತ್ಯೇಕವಾಗಿ ಹೆರಿಗೆಗಾಗಿ ಕೊಟ್ಟಿದೆ.

Sri GANJI VEERAPPA.—Is it not the policy of the Government to provide proper maternity facilities in all taluk headquarters ?

Sri K. NAGAPPA ALVA.—Yes, Sir.

Sri GANJI VEERAPPA.—Does not Chiknaikanahalli being a taluk headquarter come under that category ?

Sri K. NAGAPPA ALVA.—That is why it is already there.

ಶ್ರೀ ಸಿ. ಎಚ್. ಲಿಂಗದೇವರು.—ಯಾವಾಗ ಯಾರು ರೆಪ್ರಜೆಂಟೇಷನ್ ಕೊಡಬೇಕು ?

ಶ್ರೀ ಕೆ. ನಾಗಪ್ಪ ಆಳ್ವ.—ತಾಲ್ಲೂಕ್‌ಬೋರ್ಡ್ ಮುಖಾಂತರ ಮುನಿಸಿಪಾಲ್ಟಿಯಿಂದ ರೆಪ್ರಜೆಂಟೇಷನ್ಸ್ ಬರಬೇಕು.

ಶ್ರೀ ಸಿ. ಎಚ್. ಲಿಂಗದೇವರು.—ಮುನಿಸಿಪಾಲ್ಟಿಯು ಒಂದು ರೆಜಲ್ಯೂಷನ್ ಪಾಸ ಮಾಡಿ ಕಳಿಸಿದೆ. ಅದು ಸರಕಾರಕ್ಕೆ ಬರಲಿಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸ್ವಾಮಿ, ಈ ಪ್ರೈಮರಿ ಹೆಲ್ತ್ ಸೆಂಟರಿನಲ್ಲಿ ನಾಲ್ಕು ಬೆಡ್ಡುಗಳನ್ನು ಹೆರಿಗೆಗಾಗಿ ಪ್ರತ್ಯೇಕವಾಗಿ ಇಟ್ಟಿದೆಯೆಂದು ಹೇಳಿದರು. ಹಾಗಾದರೆ ಅಲ್ಲಿ ಒಂದು ದಿವಸಕ್ಕೆ ಎಷ್ಟು ಹೆರಿಗೆಗಳು ಆಗುತ್ತವೆ ? ಹೆರಿಗೆಗಾಗಿ ಎಷ್ಟು ದಿವಸಕ್ಕೆ ಒಂದು ಬೆಡ್ಡು ದೊರೆಯಬೇಕು ? ಒಂದು ದಿವಸದಲ್ಲಿ ಎಲ್ಲರಿಗೂ ಈ ನಾಲ್ಕು ಬೆಡ್ಡುಗಳನ್ನು ಹೇಗೆ ಒದಗಿಸುತ್ತಾರೆ ?

Mr. SPEAKER.—The Hon'ble Member is giving discourses. But he is not putting any supplementaries.

ಶ್ರೀ ಕೆ. ನಾಗಪ್ಪ ಆಳ್ವ.—ನಾಲ್ಕು ಬೆಡ್ಸ್ ಇವೆ. ನಾಲ್ಕು ಜನ ಮಿಡ್‌ವೈವ್ಸ್ ಬೇರೆಬೇರೆ ಕಡೆ ಹೋಗಿ ಕೆಲಸ ಮಾಡುತ್ತಾರೆ. ಹೆರಿಗೆಗಾಗಿ ಬೇಕಾದಷ್ಟು ಅನುಕೂಲ ಮಾಡಲಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಚಿಕ್ಕನಾಯಕನಹಳ್ಳಿ ಟೌನಿನಲ್ಲಿ ಏನಾದರೂ ಹೆರಿಗೆ ಆಸ್ಪತ್ರೆ ಅನುಕೂಲ ಮಾಡಿಕೊಟ್ಟಿದ್ದೀರಾ?

ಶ್ರೀ ಕೆ. ನಾಗಪ್ಪ ಆಳ್ವ.—ಟೌನಿನಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ ಇದೆ. ಅದರಲ್ಲಿ ನಾಲ್ಕು ಬೆಡ್ಡುಗಳನ್ನು ಹೆರಿಗೆಗಾಗಿ ಪ್ರತ್ಯೇಕವಾಗಿ ಇಟ್ಟಿದೆ.

ಶ್ರೀ ಸಿ. ಎಚ್. ಲಿಂಗದೇವರು.—ನಾಲ್ಕು ಬೆಡ್ಸ್ ಅನುಕೂಲಮಾಡಿಕೊಟ್ಟಿದೆ ಎಂದು ಹೇಳಿದಿರಿ. ಅಲ್ಲಿ ಲೇಡಿ ಡಾಕ್ಟರ್ ಇದ್ದಾರೆಯೇ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲ. ಅಸಿಸ್ಟಂಟ್ ಸರ್ಜನ್ ಇದ್ದಾರೆ.

1-00 P.M.

Abolition of Sub-Registrars' Offices situated in places other than Taluk Headquarters in South Kanara District.

*Q.—622. Sri SANJEEVANATH AIKALA (Surathkal).—

Will the Government be pleased to state :—

(*a*) whether it is a fact that they have proposed to abolish all Sub-Registrars' Offices situated in places other than Taluk Headquarters in the District of South Kanara ;

(*b*) if so, what are the reasons for the same ;

(*c*) how many Sub-Registrars' Offices are there in South Kanara and where they are situated ?

*A.—Sri M. V. KRISHNAPPA (Minister for Revenue).—

(*a*) The matter is under examination.

(*b*) *Vide* reply to clause (*a*) above.

(*c*) 15.

The Offices are situated as follows :—

	Place	*No. of offices*
1	Mangalore	2
2	Kundapur	1
3	Udipi	1
4	Karkal	1
5	Puttur	1
6	Buntwal	1
7	Belthangadi	1
8	Mulki	1
9	Baindur	1
10	Shankaranarayana	1
11	Brahmavar	1
12	Mudabidri	1
13	Sullia	1
14	Vittal	1
	Total	15